ವಿಜಯವಾಣಿ
ಕನ್ನಡಿಗರ ಧ್ವನಿ



ಸಮೃದ್ಧಾ ಆಳ್ವಾ, ಫರಿಹಾ ಜಮನ್, ಪೂರ್ವಾ ಎಸ್, ಸುರಭಿ ತಿಪ್ರೆ, ಶಾನ್ ಡಿಸೋಜಾ (ನಿಂತವರು ಎಡದಿಂದ) ಗಗನ್ ಎ.ಪಿ, ಆರ್. ಚೆನ್‌ರಾಜ್ ಜೈನ್, ಯು.ವಿ. ಶಂಕರ್, ಸುಜಿತ್ ಕೆ.ವಿ. (ಕುಳಿತವರು ಎಡದಿಂದ)

# ಜೈನ್ ವಿವಿಗೆ ಸಮಗ್ರ ಪ್ರಶಸ್ತಿ

**ಬೆಂಗಳೂರು:** ಕೋಲ್ಕತ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಮತ್ತು ಪುರುಷರ ಈಜು ಚಾಂಪಿಯನ್‌ಷಿಪ್‌ನಲ್ಲಿ ಜೈನ್ ವಿಶ್ವವಿದ್ಯಾಲಯ ಸಮಗ್ರ ಚಾಂಪಿಯನ್ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಅಲ್ಲದೇ ಮಹಿಳೆಯರ ಈಜಿನಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿತು.

ಮಹಿಳೆಯರ ವಿಭಾಗದಲ್ಲಿ 59 ಮತ್ತು ಪುರುಷರ ವಿಭಾಗದಲ್ಲಿ 24 ಅಂಕ ಗಳಿಸಿದ ಜೈನ್ ವಿಶ್ವವಿದ್ಯಾಲಯ ಟೂರ್ನಿಯ ಸಮಗ್ರ ಚಾಂಪಿಯನ್ ಪ್ರಶಸ್ತಿ ಗೆದ್ದು ಬೀಗಿತು. ಮಹಿಳೆಯರ ಈಜು ವಿಭಾಗದಲ್ಲಿ 59 ಅಂಕ ಕಲೆಹಾಕಿದ ಜೈನ್ ವನಿತೆಯರು ಮೊದಲ ಸ್ಥಾನ ಪಡೆದರು.

ಪುರುಷರ ಈಜಿನಲ್ಲಿ 33 ಅಂಕ ಗಳಿಸಿದ ಬೆಂಗಳೂರು ವಿವಿ ಮೊದಲ ರನ್ನರ್ ಅಪ್ ಆದರೆ, 48 ಅಂಕ ಗಳಿಸಿದ ಪಂಜಾಬ್ ವಿಶ್ವವಿದ್ಯಾಲಯ ಚಾಂಪಿಯನ್ ಆಯಿತು. ಚೆನ್ನೈನಲ್ಲಿರುವ ಅಣ್ಣಾ ವಿಶ್ವವಿದ್ಯಾಲಯ (31 ಅಂಕ) 2ನೇ ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿತು.